ಶಿವಮೊಗ್ಗ ಡಿಸ್ಟ್ರಿಕ್ಟ್.

1903ನೆ ಇಸವಿ ಆಗಸ್ಟ್ ತಾರೀಖು 31ನೆ ಸೋಮವಾರ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟ್ ಫಂಡು ಬೋರ್ಡು ಮಿಟಿಂಗ್ ಪ್ರೊಸೀಡಿಂಗ್ಸ್‌ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗತಃ ಮೆಂಬರುಗಳು.

ಮೆ॥ ಸಿ. ಎಸ್. ಬಾಲಸುಂದರಮ್ಮಯ್ಯರ್‌ರವರು, ಡಿಸ್ಟ್ರಿಕ್ಟ್ ಚಾರ್ಜ್‌ನಲ್ಲಿ ಇರುವ ಸಾಗರದ ಅಸಿಸ್ಟೆಂಟ್ ಕಮಿಷನರ್ ಮತ್ತು ಪ್ರೆಸಿಡೆಂಟರವರು, ಸಭಾಧ್ಯಕ್ಷರು.

1. ,, ಕೆ. ಪ್ರಹ್ಲಾದರಾಯರವರು, ಎಗ್ಸಿಕ್ಯೂಟಿವ್ ಇಂಜಿನಿಯರವರು.
2. ,, ಟಿ. ಕೆ. ಚೊಕ್ಕಣ್ಣನವರು, 2ನೆ ಅಸಿಸ್ಟೆಂಟ್ ಕಮಿಷ್ಣರವರು.
3. ,, ಡಬ್ಲಿಯು. ಶ್ರೀನಿವಾಸಯ್ಯಂಗಾರ್‌ರವರು, ಶಿವಮೊಗ್ಗಾ ಸಿವಿಲ್ ಆಸ್ಪತ್ರೆ ಇಂಚಾರ್ಜ್ ಅಸಿಸ್ಟೆಂಟ್ ಸರ್ಜ್ಜನ್‌ರವರು.
4. ,, ಟಿ. ಕೆ. ಲಕ್ಷ್ಮಣ ಐಯ್ಯರ್‌ರವರು, ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್.
5. ,, ಜೆ. ಡಿ. ಚಿನ್ನಪ್ಪಾವುಬಿಳ್ಳಿ, ಹೊನ್ನಾಳಿ ತಾಲ್ಲೂಕು ಅಮಲ್ದಾರ್.
6. ,, ಎಸ್. ಕೃಷ್ಣಯ್ಯರ್‌ರವರು, ಚನ್ನಗಿರಿ ತಾಲ್ಲೂಕು ಅಮಲ್ದಾರ್.
7. ,, ಕೆ. ಆರ್. ಸುಬ್ಬರಾವ್, ಶಿಕಾರಿಪುರ ತಾಲ್ಲೂಕು ಅಮಲ್ದಾರ್.
8. ,, ಜಿ. ಹನುಮಂತರಾಯರವರು, ಸಾಗರ ತಾಲ್ಲೂಕು ಅಮಲ್ದಾರ್.

ನೋಟ್—ಕುಂಸಿ ಸಬ್ ತಾಲ್ಲೋಕು ಡೆಪ್ಯೂಟಿ ಅಮಲ್ದಾರ್ ಮೆ॥ ಹೆಚ್. ಕೇಶವಾಚಾರ್ಯ್ರು, ಸಹ ಹಾಜರಾಗಿ ಇದ್ದರು.

ಉದ್ಯೋಗಸ್ಥರಲ್ಲದ ಮೆಂಬರುಗಳು.

1. ಮೆ॥ ಸಿ. ಚನ್ನಬಸಪ್ಪನವರು, ಶಿವಮೊಗ್ಗಾ ತಾಲ್ಲೂಕು.
2. ,, ಕೆ. ಅನಂತರಾಮ್ಮಯ್ಯಂಗಾರ್ರು, ಚನ್ನಗಿರಿ ತಾಲ್ಲೂಕು.
3. ,, ಸಿ. ಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.

ಗೈರ್ ಹಾಜರು.

ಉದ್ಯೋಗತಃ ಮೆಂಬರುಗಳು.

1. ಮೆ॥ ಸಿ. ನಾರಾಯಣರಾಯರವರು, 1ನೆ ಅಸಿಸ್ಟೆಂಟ್ ಕಮಿಷನರವರು.
2. ,, ಎಸ್. ಕೃಷ್ಣಪ್ಪ, ಸೊರಬ ತಾಲ್ಲೂಕು ಅಮಲ್ದಾರ್.
3. ,, ಬಿ. ಎಸ್. ರಾಜೋಜಿರಾವ್, ನಗರ ತಾಲ್ಲೂಕು ಅಮಲ್ದಾರ್.
4. ,, ಎಸ್. ವೆಂಕಟರಮಣ ಶಾಸ್ತ್ರಿ, ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್.

ಉದ್ಯೋಗಸ್ಥರಲ್ಲದ ಮೆಂಬರುಗಳು.

1. ಮೆ॥ ಹೊಸಬಾಳೆ ತಿಮ್ಮಪ್ಪನವರು, ಸೊರಬ ತಾಲ್ಲೂಕು.
2. ,, ಅರಮನೆ ಕೊಪ್ಪದ ರಾಮಪ್ಪನವರು, ನಗರ ತಾಲ್ಲೂಕು.
3. ,, ಜವಳಿ ಮಂಜಪ್ಪನವರು, ತೀರ್ಥಹಳ್ಳಿ ತಾಲ್ಲೂಕು.
4. ಇನಾಂದಾರ್ ಮೆಂಬರ್ (ಖಾಲಿ).

1. ಡಿಸ್ಟ್ರಿಕ್ಟ್ ಫಂಡು ಲೆಕ್ಕಗಳು :—ಕಂಟ್ರೋಲರ್‌ರವರಿಂದ ಪ್ಯಾಸಾಗಿ ಬಂದ 1903ನೆ ಇಸವಿ ಏಪ್ರಿಲ್ ಮತ್ತು ಮೇ ತಿಂಗಳ ಡಿಸ್ಟ್ರಿಕ್ಟ್ ಫಂಡು ಜಮಾ ಖರ್ಚು ಲೆಕ್ಕಗಳನ್ನು ಓದಲಾಗಿ ಇವುಗಳನ್ನು ಅಂಗೀಕರಿಸಬಹುದಾಗಿ ತೀರ್ಮಾನವಾಯಿತು.

2. ಮೈಸೂರು ಸ್ಥಳೀಯ ವೈದ್ಯಶಾಲೆಯಲ್ಲಿ ತೇರ್ಗಡೆ ಹೊಂದಿದ ಉಮೇದವಾರುಗಳು :—ಮೈಸೂರು ಸ್ಥಳೀಯ ವೈದ್ಯ ಶಾಲೆಯಲ್ಲಿ ತೇರ್ಗಡೆ ಹೊಂದಿ ಇರತಕ್ಕ ಉಮೇದುವಾರುಗಳಿಗೆ ಸಂಬಳ ಕೊಟ್ಟು ಇವರನ್ನು ಔಷಧಿ ಕೊಡಲು ಇಟ್ಟುಕೊಳ್ಳುವದಕ್ಕೆ ಡಿಸ್ಟ್ರಿಕ್ಟ್ ಮತ್ತು ಮುನಿಸಿಪಲ್ ಬೋರ್ಡಿನವರು ಸಮರ್ಥರಾಗಿ ಇರುವ ಭಾಗದಲ್ಲಿ ಇಂಥವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ವಿಚಾರದಲ್ಲಿ, ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡು ಬೋರ್ಡು ಪ್ರೆಸಿಡೆಂಟರವರಿಂದ ಬರುವ ಸಲಹೆಗಳನ್ನು ಅಂಗೀಕರಿಸುವ ವಿಚಾರದಲ್ಲಿ ಗೌರ್ನ್‌ಮೆಂಟಿನವರು ತುಂಬಾ ಕುತೂಹಲವುಳ್ಳವರಾಗಿ ಇರುತ್ತಾರೆಂಬದಾಗಿ ಬಂದ ಗೌರ್ನ್‌ಮೆಂಟು 1903ನೆ ಜುಲೈ 30ನೆ ಮುಕ್ತಂ 18301—9 ಎಲ್. ಎಫ್. 344—96ನೆ ನಂಬರು ಪ್ರೊಸಿಡಿಂಗ್ಸು ಓದಲಾಗಿ ಇದನ್ನು ರಿಕಾರ್ಡು ಮಾಡಿಕೊಳ್ಳಬಹುದಾಗಿ ಬೋರ್ಡಿನವರು ತೀರ್ಮಾನಿಸಿದರು.

3. ವೈದ್ಯ ವಿದ್ಯಾರ್ಥಿ ವೇತನಗಳು :—ಸ್ರ 1887ನೆ ಡಿಸಂಬರು 24ನೆಂ. ಮುಕ್ತಂ 5332—43—149ನೆ ನಂಬರು ಗೌರ್ನಮೆಂಟ್ ಪ್ರೊಸಿಡಿಂಗ್ಸು ಅನುಸರಿಸಿ 1901—02ನೆ ಸಾಲು ಆಖೈರು ಪರಿಯಂತರವು ಡಿಸ್ಟ್ರಿಕ್ಟ್ ಫಂಡಿಗೆ ಖರ್ಚು ಬೀಳುತ್ತಾ ಯಿದ್ದ ವಿದ್ಯಾರ್ಥಿ ಆಸ್ಪಟಲ್ ಅಸಿಸ್ಟೆಂಟರುಗಳ ವೇತನವು ಪರೀಕ್ಷೆಯ ರುಸುಂ ಮುಂತಾದ ಖರ್ಚು 1902—03ನೆ ಸಾಲು ಲಾಗಾ ಯಿತು ಮೆಡಿಕಲ್ ಬಜೆಟ್ಟಿಗೆ ಖರ್ಚು ಬೀಳತಕ್ಕದ್ದಾಗಿ ಇರುತ್ತೆಂತ ಬಂದ ಗೌರ್ನಮೆಂಟ್ 1903ನೆ ಜುಲೈ 27ನೆ ಮುಕ್ತಂ ಪ್ರೊಸಿ ಡಿಂಗ್ಸು ಓದಲಾಗಿ ಇದನ್ನು ರಿಕಾರ್ಡು ಮಾಡಿಕೊಳ್ಳಬಹುದಾಗಿ ಬೋರ್ಡಿನಲ್ಲಿ ತೀರ್ಮಾನವಾಯಿತು.

4. ಶಿವಮೊಗ್ಗ ಟವ್ನ ಸೂಲಗಿತ್ತಿಯ ತಲಬು :—ಹೆರಿಗೆ ಕೆಲಸ ನಡಿಸಲು ಶಿವಮೊಗ್ಗ ತಾಲ್ಲೋಕು ಗ್ರಾಮಾಂತರದ ಪ್ರಜೆಗಳು ಶಿವಮೊಗ್ಗ ಟವ್ನ ಸೂಲಗಿತ್ತಿಯನ್ನು (ಮ್ಯುನಿಸಿಪಲ್) ಧಾರಾಳವಾಗಿ ಕರಿಯುತ್ತಾರೆಯೇ ಹ್ಯಾಗೆ? ಹಾಗೆ ಕರಿಯುತ್ತಾ ಯಿದ್ದರೆ ಈ ಸೂಲಗಿತ್ತಿಯ ಅರ್ಧ ತಲಬನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಲೂ ಈ ಬೋರ್ಡಿನವರು ಒಪ್ಪುತ್ತಾರೆಯೇ ಹ್ಯಾಗೆ? ಇವರ ತೀರ್ಮಾನ ನಿಸಿ ಈ ವಿಷಯದಲ್ಲಿ ಪ್ರೆಸಿಡೆಂಟರವರು ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಬೇಕೆಂಬದಾಗಿ ಬಂದ 1903ನೆ ಇಸವಿ ಆಗಸ್ಟು 1ನೆ ಮುಕ್ತಂ ನಂಬರು 517—18 ಎಲ್. ಎಫ್. 137—02ನೆ ಗೌರ್ನಮೆಂಟ್ ಪ್ರೊಸಿಡಿಂಗ್ಸಿನ 2ನೆ ಕಲಂ ಎಕ್ ಸ್ಟ್ರಾಕ್ಟು ಓದಲಾಗಿ ಶಿವಮೊಗ್ಗ ತಾಲ್ಲೋಕು ಗ್ರಾಮಾಂತರದ ಜನಗಳಲ್ಲಿ ನಡಿಯಬೇಕಾದ ಹೆರಿಗೆ ಕೆಲಸಕ್ಕಾಗಿ ಡಿಸ್ಟ್ರಿಕ್ಟು ಫಂ ಡಿನಿಂದ ತಲಬು ತೆಗದುಕೊಳ್ಳುತ್ತಾ ಇರುವ ಒಬ್ಬ ರಿಲಿವಿಂಗ್ ಮಿಡ್‌ವೈಫ್ (ಸೂಲಗಿತ್ತಿ) ಈ ತಾಲ್ಲೋಕಿಗೆ ಇರುವದ್ದರಿಂದಲೂ ಮತ್ತು ಹಾಲಿ ಇರತಕ್ಕ ಮ್ಯುನಿಸಿಪಲ್ ಸೂಲಗಿತ್ತಿಯನ್ನು ಗ್ರಾಮಾಂತರ ವಾಸಿಗಳು ಧಾರಾಳವಾಗಿ ಅಪೇಕ್ಷಿಸುತ್ತ ಇರುವಂತೆ ಕಂ ಡುಬರುವದಿಲ್ಲವಾದ್ದರಿಂದಲೂ ಈಕೆಯ ತಲಬಿನ ಅರ್ಧಾಂಶವನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಲು ಬೋರ್ಡಿನವರು ಒಪ್ಪುವದಿಲ್ಲವಾಗಿ ತೀರ್ಮಾನವಾಯಿತು.

5. ತಾಳಗುಪ್ಪ ಮುನಾಫರ್‌ಖಾನೆ :—ಸಾಗರದ ತಾಲ್ಲೋಕು ಈ ಮುನಾಫರ್‌ಖಾನೆಯ ರಿಪೇರಿಗಾಗಿ 1,287—0—0 ರೂಪಾಯಿನ ಅಂದಾಜಾ ಮತ್ತು ಪ್ಲಾನು ನಿಸಿ ಬಂದ ಶಿವಮೊಗ್ಗ ಡಿವೀರ್ಜ ಎಗ್ಜಿಕ್ಯೂಟಿವ್ ಇಂಜನಿಯರವರ 1903ನೆ ಜೂನ್ 22ನೆ ಮುಕ್ತಂ 465ನೆ ನಂಬರು ಡಾಕೇಟ್ ಆಖೈರಾಗಿ ವುಳ್ಳ ಕಾಗದಪತ್ರಗಳು ಓದಲಾಗಿ ಎಗ್ಜಿಕ್ಯೂಟಿವ್ ಇಂಜಿನಿಯರವರಿಂದ ರಿವೈ ಜಾಗಿ ಬಂದ 1,287—0—0 ರೂಪಾಯಿನ ಅಂದಾಜಾವನ್ನು ಪ್ಯಾಸ್ಮಾಡಬಹುದಾಗಿ ತೀರ್ಮಾನವಾಯಿತು.

6. ನ್ಯಾಮತಿ—ಆರುಂಡಿ ರಸ್ತೆ :—ಈ ರಸ್ತೆಗೆ ಕಂಕರು ಇಲ್ಲನೆ ಮೆಟಲ್ ಬಿಛಾಯಿಸಲು ಎಗ್ಜಿಕ್ಯೂಟಿವ್ ಇಂಜಿನಿಯರವ ರಿಂದ ತಯಾರಾಗಿ ಬಂದ 548 ಮತ್ತು 622 ರೂಪಾಯಿನ ಅಂದಾಜಾನಿಸಿ ಬಂದ ಎಗ್ಜಿಕ್ಯೂಟಿವ್ ಇಂಜಿನಿಯರವರ 1903ನೆ ಜೂನ್ 26ನೆ ಮುಕ್ತಂ ನಂಬರು 494ನೆ ಡಾಕೇಟ್ ಆಖೈರಾಗಿ ಉಳ್ಳ ಕಾಗದ ಪತ್ರಗಳು ಓದಲಾಗಿ ಲೋಕಲ್ ಫಂಡಿಗೆ ಸೇರಿದ ಈ ರಸ್ತೆಯು ಮೂರು ಫರ್ಲಾಂಗನ್ನು 622—0—0 ರೂಪಾಯಿ ಲಾಗವಡು ಮುಟ್ಟಿಸಿ ಮೆಟಲ್ ಬಿಛಾಯಿಸಲು ಬಂದು ಇರುವ ಅಂದಾಜಾವನ್ನು ಮಂಜೂರು ಮಾಡಬಹುದಾಗಿಯೂ ಮ್ಯುನಿಸಿಪಲ್ ಸಡಹದ್ದಿನಲ್ಲಿ ಇರತಕ್ಕ ಈ ರಸ್ತೆಯ ಭಾಗವನ್ನು ಬದಸ್ತೂರು ನ್ಯಾಮತಿ ಮ್ಯುನಿಸಿ ಪಾಲ್ಟಿಯವರು ದುರಸ್ತು ಮಾಡಲು ಕೇಳಿಕೊಳ್ಳಬೇಕಾಗಿಯೂ ಬೋರ್ಡಿನವರು ತೀರ್ಮಾನಿಸಿದರು.

7. ಆಸ್ಪತ್ರೆ ಕಾಯಿಲೆ ಜನರ ಕೊಠಡಿಗಳು :—ಲೋಕಲ್ ಫಂಡು ಆಸ್ಪತ್ರೆಗಳಿಗೆ ಸೇರಿ ಇರತಕ್ಕ ಕಾಯಿಲೆ ಜನರ ಕೊಠ ಡಿಗಳನ್ನು ಹೆಗೆದು ಹಾಕಿ ಇವುಗಳನ್ನು ಶುಲಭವಾದ ಬಾಡಿಗೆ ತೆಗದುಕೊಂಡು ಆಸ್ಪಟಲ್ ಅಸಿಸ್ಟೆಂಟರಿಗೆ ವಾಸಕ್ಕೆ ಅನುಕೂಲ ಪಡಿಸಿ ಕೊಡುವ ವಿಚಾರದಲ್ಲಿ ಹಜರತ್ ಸೀನಿಯರ್ ಸರ್ಜ್ಜ ಸಾಹೇಬರವರು ಗವರ್ನಮೆಂಟಿಗೆ ಬರದ 1903ನೆ ಮಾರ್ಚಿ 18ನೆ ಮುಕ್ತಂ ಜ. 333ನೆ ನಂಬರು ಡಾಕೇಟ್ ಕಾಯಿದಲ್ಲಿ ಕಂಡ ಅಂಶವನ್ನು ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಬೋರ್ಡಿನಲ್ಲಿ ಇಟ್ಟು ಇವರ ತೀರ್ಮಾನ ಮತ್ತು ಇದರ ಮೇಲೆ ಪ್ರೆಸಿಡೆಂಟರವರ ಅಭಿಪ್ರಾಯ ಸಹಾ ತಿಳಿಯಪಡಿಸಬೇಕಾಗಿ ಬಂದ ಗವರ್ನಮೆಂಟ್ 1903ನೆ ಆಗ ಸ್ಟು 13ನೆ ಮುಕ್ತಂ 769—77 ಎಲ್. ಎಫ್. 357—92ನೆ ನಂಬರು ಪ್ರೊಸಿಡಿಂಗ್ಸು ಓದಲಾಗಿ ಆಸ್ಪಟಲ್ ಅಸಿಸ್ಟೆಂಟರುಗಳು ಆಸ್ಪ ತ್ರೆ ಸಮೀಪದಲ್ಲಿ ವಾಸಮಾಡುವದೇನೊ ಅಪೇಕ್ಷಣೀಯವಾದ್ದೆಂತಲೂ ಆದರೆ ಕಾಯಿಲೆ ಜನರ ಕೊಠಡಿಗಳನ್ನು ಆಸ್ಪತ್ರೆ ಅಸಿಸ್ಟೆಂಟರ ವಾಸಕ್ಕು ವರಾಂಡಾದ ಬಂದು ಭಾಗಕ್ಕೆ ಗೋಡೆ ಹಾಕಿ ಇದನ್ನು ಕಾಯಿಲೆ ಜನರ ಉಪಯೋಗಕ್ಕು ಅನುಕೂಲ ಪಡಿಸಬೇಕೆಂಬುವ ಸಲಹೆಯು ಇವಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಬದಗಿಸಿ ಕೊಡಬಹುದೇ ಹ್ಯಾಗೆ ಎಂಬುವ ಅಂಶ ಮಾತ್ರ ಅನುಮಾನಾಸ್ಪದ ವಾಗಿರುತ್ತೆಂತಲೂ ಬೋರ್ಡಿನವರು ತೀರ್ಮಾನಿಸಿದರು.

8. 1902—03ನೆ ಸಾಲಾಖೈರಿಗೆ ಬಾಕಿ ಬಂದ ಡಿಸ್ಟ್ರಿಕ್ಟು ಫಂಡು ಕಾವುಗಾರಿಗಳು :—1902—03ನೆ ಸಾಲಾಖೈರಿಗೆ ಬಾಕಿ ಬಂದು ರಿ-ಅಪ್ರೊಪ್ರಿಯೇಷನ್ ಕೇಳಿಬೇಕಾಗಿ ಇರುವ ರೆವಿನ್ಯು ಇಲಾಖೆ ಮಾರೀಫತ್ತು ನಡಿಯಬೇಕಾಗಿ ಇರುವ ಡಿಸ್ಟ್ರಿಕ್ಟು ಫಂಡು ಕಾವುಗಾರಿಗಳ ತಃಖ್ತೆಯನ್ನು ಓದಲಾಗಿ ಸದರಿ ತಃಖ್ತೆಯನ್ನು ಮಂಜೂರ್ಮಾಡಬಹುದಾಗಿ ಬೋರ್ಡಿನಲ್ಲಿ ತೀರ್ಮಾನಿಸಿದರು.

9. 1902-03ನೆ ಸಾಲಾಖೈರಿಗೆ ಬಾಕೀಲಿ ಬಂದ ಲೋಕಲ್ ಫಂಡ್ಸು ಜನರಲ್ ಕಾವುಗಾರಿಗಳು :—1902—03ನೆ ಸಾ ಲಾಖೈರಿಗೆ ಬಾಕೀಲಿ ಬಂದು ರಿ-ಅಪ್ರೊಪ್ರಿಯೇಷನ್ ಕೇಳಿಬೇಕಾಗಿ ಇರುವ ರೆವಿನ್ಯು ಇಲಾಖೆ ಮಾರೀಫತ್ತು ನಡಿಯಬೇಕಾದ ಲೋಕ ಲ್ ಫಂಡ್ಸು ಜನರಲ್ ಕಾವುಗಾರಿಗಳ ತಃಖ್ತೆಗಳನ್ನು ಓದಲಾಗಿ ಸದರಿ ತಃಖ್ತೆಯಲ್ಲಿ ಕಂಡ ರಿ-ಅಪ್ರೊಪ್ರಿಯೇಷನನ್ನು ಕೇಳಿಕೊಳ್ಳ ಬೇಕಾಗಿ ತೀರ್ಮಾನವಾಯಿತು.

10. 1902—03ನೆ ಸಾಲಾಖೈರಿಗೆ ಬಾಕೀಲಿ ಬಂದ ಇಂಜಿನಿಯರ್ ಇಲಾಖೆ ಮಾರೀಫತ್ತು ನಡಿಯುವ ಡಿಸ್ಟ್ರಿಕ್ಟು ಫಂಡು ಕಾವುಗಾರಿಗಳು :—1902—03ನೆ ಸಾಲಾಖೈರಿಗೆ ಬಾಕೀಲಿ ಬಂದ ಇಂಜಿನಿಯರ್ ಇಲಾಖಾ ಮಾರೀಫತ್ತು ನಡಿಯುವ ರಿ-ಅಪ್ರೊ ಪ್ರಿಯೇಷನ್ ಕೇಳಬೇಕಾಗಿ ಇರತಕ್ಕ ಕಾವುಗಾರಿಗಳ ತಃಖ್ತೆಯನ್ನು ಓದಲಾಗಿ ಬೇಕಾಗುವ ರಿ-ಅಪ್ರೊಪ್ರಿಯೇಷನ್ ಮಂಜೂರಾಗ ಬಹುದಾಗಿ ತೀರ್ಮಾನವಾಯಿತು.

11. 1903—04ನೆ ಸಾಲ್ ಡಿಸ್ಟ್ರಿಕ್ಟ್ ಫಂಡು ಸಪ್ಲಿಮೆಂಟಲ್ ಬಜ್ಜಟ್ :—ಪುರು ಬಜ್ಜಟಿನಲ್ಲಿ ಕೇರದೆ ಇರತಕ್ಕ ಜಟಂಗಳಿಗೆ ಬೇಕಾದ ಮೊಬಲಗನ್ನು ಕೇರಿಸಿ ತಯಾರಾದ ಈ ಬಜ್ಜಟ್ಟನ್ನು ಬೆದಲಾಗಿ ಅಭಿಪ್ರಾಯ ಪಡುವ ಮೇರೆ ರಿ.ಅಪ್ರೊಪ್ರಿಯೇಷ್ಯ ಅಡಗಿಸಿಕೊಂಡು ಇರತಕ್ಕ ಈ ಸಪ್ಲಿಮೆಂಟಲ್ ಬಜ್ಜಟ್ಟನ್ನು ಮಂಜೂರ್ಮಾಡಬಹುದಾಗಿ ತೀರ್ಮಾನವಾಯಿತು.

12. ನ್ಯಾಮತಿ ಡಿಸ್ಪೆನ್ಸರಿ :—ಹಂಗಾಮಿ ತರೇಕಾಗಿ ನ್ಯಾಮತಿಯಲ್ಲಿ (ಹೊನ್ನಾಳಿ ತಾಲ್ಲೂಕು) ಆಸ್ಪತ್ರೆ ಇಡುವದನ್ನು ಮಂಜೂರ್ಮಾಡಿ ಇರುವದಾಗಿ ಗವರ್ನ್ಮೆಂಟಿನಿಂದ ಸಾದರಾದ 1903ನೆ ಆಗಷ್ಟು 14ನೆ ಮರ್ಕುಂ 788—90—ಎಲ್. ಎಫ್. 140—92ನೆ ನಂಬರು ಪ್ರೊಸಿಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

13. ಆಯನೂರಲ್ಲಿ ಸಂತೆ ಮಳಿಗೆಗಳು :—ಸಂತೆ ದಿವಸ ಅಕ್ಕಿ ವ್ಯಾಪಾರಸ್ಥರು ಮಳಿಗೆಗಳಲ್ಲಿ ಅಕ್ಕಿ ಇಟ್ಟುಕೊಂಡು ವ್ಯಾಪಾರ ನಡಿಸಲು ಇವರ ಉಪಯೋಗಕ್ಕಾಗಿ ಆಯನೂರಲ್ಲಿ ಸಂತೆ ಮಳಿಗೆಗಳು ತಯಾರ್ಮಾಡಿಸಿ ಕೊಡುವ ವಿಚಾರದಲ್ಲಿ ಕುಮಸಿ ನಟ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಅಭಿಪ್ರಾಯ ಪಟ್ಟಿದ್ದನ್ನು ಸ್ಥಳ ವಿಚಾರದಿಂದ ಬಂದು ಅಂದಾಜು ತಯಾರು ಮಾಡಿಸಿ ತರಿಸಿಕೊಳ್ಳಬೇಕಾಗಿ ಬೋರ್ಡಿನವರು ತೀರ್ಮಾನ ಮಾಡಿದರು.

ಸಿ. ಎಸ್. ಬಾಲಸುಂದರಂ ಅಯ್ಯರ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡ್ ಬೋರ್ಡು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 84.

ಅರ್ಜೀದಾರು ಮಹಮ್ಮದ್ ಮದಾರಸಾಬ್ ವಲ್ಲದ ಹಯಾತ್ ಮೊಹರ್ದಿ ಶಿವಮೊಗ್ಗಾ ತಾಲ್ಲೂಕು ಹೊಳೆಹೊನ್ನೂರು ವಾಸ್ತವ್ಯನಾದ ಹೊಳೆಹೊನ್ನೂರು ಕುಂಬಾರಕೇರಿ ಇಮಾಂಖಾ ಯವರ ಮಗಳು ಮುಹಾಬೂಬಿ ಯವರ ಆಸ್ತೀ ವಿಷಯದಲ್ಲಿ—

ಸದರೀ ವ್ಯೆನರಾದ ಮಹಾಬೂಬಿ ಯವರಿಗೆ ಕ್ಷೇಮಚಿಂತಕ ಆಗಬೇಕೆಂಬ ಹಕ್ಕಿನ ಮೇಲೆ ಶಿವಮೊಗ್ಗಾ ತಾಲ್ಲೂಕು ಹೊಳೆಹೊನ್ನೂರು ಸ್ಥಳದ ಮಹಮ್ಮದ ಮದಾರಸಾಬ್ ವಲ್ಲದ ಹಯಾತ್ ಮೊಹರ್ದಿ ಸದರೀ ವ್ಯೆನರಿನ ಸ್ಯು|| 500 ರೂಪಾಯಿನ ಸ್ಥಿರ ಚರ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಯ 1903ನೆ ಇಸವಿ ಅಕ್ಟೋಬರ್ ತಾರೀಖು 16ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ಯ 1903ನೆ ಇಸವಿ ಸೆಪ್ಟಂಬರ್ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 88.

ಮೃತಪಟ್ಟ ಹೊಳೆಹೊನ್ನೂರಲ್ಲಿ ವಾಸವಾಗಿದ್ದ ಕುಂಬಾರಕೇರಿ ಸವುದಾಗಾರ ಇಮಾಂಖಾ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮಹಾಬೂಬಿ ವಲ್ಲದ ಕುಂಬಾರಕೇರಿ ಸವುದಾಗಾರ ಇಮಾಂಖಾ, ವ್ಯೆನರ್ ಕ್ಷೇಮಚಿಂತಕ ಮಹಮದ ಮದಾರಸಾಬ್, ಮೃತಪಟ್ಟ ಸದರೀ ಸವುದಾಗಾರ ಇಮಾಂಖಾರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಳೆಹೊನ್ನೂರು ಸ್ಥಳದ ಮುಹಾಬೂಬಿ ವಲ್ಲದ ಇಮಾಂಖಾ, ವ್ಯೆನರ್ ಕ್ಷೇಮಚಿಂತಕ ಮಹಮದ ಮದಾರಸಾಬರು, ಹೊಳೆಹೊನ್ನೂರು ವಾಸಸ್ಥರಾಗಿ ಮೃತ ಪಟ್ಟ ಇಮಾಂಖಾ ಯವರ ಜೀವದಗಿ ಬಗ್ಯಾಗಿ ಬರತಕ್ಕ (95—8—0) ರೂಪಾಯಿ ಸುಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ VIIನೆ ನಂಬರಿಗ್ಯುಲೇಷ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮಹಬೂಬಿ ವ್ಯೆನರ್, ಗಾರ್ಡಿಯ್ ಮಹಮದ ಮದಾರಸಾಬರ ಅರ್ಜಿಯನ್ನು ಸ್ಯ 1903ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸವುದಾಗಾರ ಇಮಾಂಸಾಬರ ಆಸ್ತಿಗೆ ಹಕ್ಕುದಾರರಾಪ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1903ನೆ ಇಸವಿ ಸೆಪ್ಟಂಬರ್ 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೇಪಯ್ಯಂಗಾರ್,
ಶಿರಸ್ತೇದಾರ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 109.

ಅರ್ಜೀದಾರು ದೇವನಹಳ್ಳಿ ತಾಲ್ಲೂಕು ಆವತಿ ಹೋಬಳಿ ಹಾರೋಹಳ್ಳೀಲಿರುವ ಬಚ್ಚಣ್ಣ ವೊರುಫ್ ಅಪ್ಪಯ್ಯ, ವ್ಯೆನರಾದ ಗೆದ್ದಲಹಳ್ಳಿ ಸ್ಥಳದ ಪವತಿ ಮುನಿಹನುಮನ ಮಕ್ಕಳು 1ನೆ ಚೆನ್ನರಾಯ, 2ನೆ ನರಸಿಹ್ಮ, 3ನೆ ಅಂಜನಿ, 4ನೆ ನರಸಿ ಇವರುಗಳ ಆಸ್ತೀ ವಿಷಯದಲ್ಲಿ—

ಸದರೀ ವ್ಯೆನರಾದ ಚೆನ್ನರಾಯ ಪೈರೇರಿಗೆ ಸೋದರಮಾವ ಆಗಬೇಕೆಂಬ ಹಕ್ಕಿನಮೇಲೆ ಬಚ್ಚಣ್ಣ ವೊರುಫ್ ಅಪ್ಪಯ್ಯನೆಂಬುವರು ಸದರೀ ವ್ಯೆನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಯ 1903ನೆ ಇಸವಿ ಅಕ್ಟೋಬರು ತಾರೀಖು 16ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ 1903ನೆ ಇಸವಿ ಆಗಸ್ಟು ತಿಂಗಳು 29ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ಸಿಂಗ್ರಾಚಾರ್, ಸಬ್ ಜಡ್ಜ್.